# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2007-08ನೇ ಸಾಲಿನಲ್ಲಿ ಸರ್ಕಾರಿ ನೌಕರರ ವರ್ಗಾವಣೆಯ ಬಗ್ಗೆ.

---

ಆದೇಶ ಸಂಖ್ಯೆ: ಸಿಆಸುಇ 9 ಸೇನೌವ 2007,
ಬೆಂಗಳೂರು, ದಿನಾಂಕ 6ನೇ ಜೂನ್ 2007.

ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್‌ಟಿಆರ್ 2001, ದಿನಾಂಕ 22-11-2001 ರಲ್ಲಿ ಸರ್ಕಾರಿ ನೌಕರರ ವರ್ಗಾವಣೆ ಕುರಿತಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಆದೇಶದ ಪ್ರಕಾರ ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಾತ್ರ ಕೆಲವು ಷರತ್ತುಗಳಿಗೊಳಪಟ್ಟು ವರ್ಗಾವಣೆಗಳನ್ನು ಮಾಡಬಹುದಾಗಿದೆ. ಏಪ್ರಿಲ್ - ಮೇ ತಿಂಗಳ ನಂತರ ವರ್ಗಾವಣೆಗಳನ್ನು ಮಾಡತಕ್ಕದ್ದಲ್ಲ. ಈ ಆದೇಶವನ್ನು 2007-08ನೇ ಸಾಲಿಗೆ ಅನ್ವಯಿಸಿ, ಪ್ರಸಕ್ತ ವರ್ಷದಲ್ಲಿ ಸಾರ್ವತ್ರಿಕ ವರ್ಗಾವಣೆಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ, ದಿನಾಂಕ 22-11-2001ರ ಸರ್ಕಾರಿ ಆದೇಶದಲ್ಲಿ ಕಲ್ಪಿಸಿರುವ ಆಸ್ಪದದನ್ವಯ ಈ ಆದೇಶದ ದಿನಾಂಕದ ನಂತರದ ಅವಧಿಯಲ್ಲಿ ವರ್ಗಾವಣೆ ಮಾಡುವ ಅನಿವಾರ್ಯ ಸಂದರ್ಭಗಳು ಬಂದೊದಗಿದಲ್ಲಿ ಅಂತಹ ಪ್ರಕರಣಗಳನ್ನು ಮೇಲ್ಕಂಡ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಲಾದ ವೃಂದ ನಿರ್ವಹಣಾ ಪ್ರಾಧಿಕಾರಗಳು ಪರಿಶೀಲಿಸಬೇಕು. ಪ್ರತಿ ಪ್ರಕರಣದಲ್ಲಿಯೂ ವರ್ಗಾವಣೆಯು ಯಾವ ರೀತಿಯಲ್ಲಿ ಅನಿವಾರ್ಯವಾಗಿದೆಯೆಂಬುದಕ್ಕೆ ಕಾರಣಗಳನ್ನು ಪ್ರಾಧಿಕಾರವು ಲಿಖಿತದಲ್ಲಿ ನೀಡಬೇಕು. ಈ ರೀತಿ ಪ್ರಾಧಿಕಾರಗಳ ಶಿಫಾರಸ್ಸುಗಳನ್ನು ಪಡೆದು ಕರ್ನಾಟಕ ಸರ್ಕಾರದ ಸಚಿವಾಲಯದ ಸಂಬಂಧಿತ ಆಡಳಿತ ಇಲಾಖೆಗಳು ಸಂಬಂಧಪಟ್ಟ ಸಚಿವರುಗಳ ಮೂಲಕ ಮುಖ್ಯಮಂತ್ರಿಯವರ ಪೂರ್ವಾನುಮೋದನೆಯನ್ನು ಕಡತದಲ್ಲಿ ಪಡೆದು ವರ್ಗಾವಣೆಗಳನ್ನು ಮಾಡಬಹುದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Devaraju

(ದೇವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ರಾಜ್ಯಪತ್ರದ ದಿನಾಂಕ 7-6-2007ರ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಸಿಆಸುಇ (ಸೇವಾ ನಿಯಮಗಳು-ಬಿ) ಶಾಖೆಗೆ ಕಳುಹಿಸಬೇಕೆಂದು ಕೋರಲಾಗಿದೆ.